# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1140 |
| ಸದಸ್ಯರ ಹೆಸರು | : | ಶ್ರೀ ಟಿ.ಎ ಶರವಣ |
| ಉತ್ತರಿಸಬೇಕಾದ ದಿನಾಂಕ | : | 21.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ವಿಷಯ | ಉತ್ತರಗಳು |
|---|---|---|
| ಅ | ಮೇಕೆದಾಟು ಯೋಜನೆ ಜಾರಿ ಪ್ರಕ್ರಿಯೆ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು) | • ಕೇಂದ್ರ ಜಲ ಆಯೋಗದಿಂದ ದಿನಾಂಕ:25.01.2019 ರಂದು ಯೋಜನಾ ವರದಿಯ ಪ್ರತಿಯನ್ನು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (Cauvery Water Management Authority-CWMA), Director (Hydrology), Director (ISW), Director (PAC) ರವರುಗಳಿಗೆ ಕಳುಹಿಸಿಕೊಟ್ಟು ಯೋಜನಾ ವರದಿಯನ್ನು ಪರಿಶೀಲಿಸಿ comments and views ಗಳನ್ನು ನೀಡುವಂತೆ ಕೋರಲಾಗಿರುತ್ತದೆ.<br>• ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ (CWMA) ಹಲವಾರು ಸಭೆಗಳಲ್ಲಿ ಮುಂದೂಡಲ್ಪಟ್ಟ ನಂತರ, ದಿನಾಂಕ:01.02.2024 ರಂದು ಜರುಗಿದ 28ನೇ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಸದರಿ ವಿಷಯದ ಕುರಿತು ತೆಗೆದುಕೊಂಡ ನಿರ್ಣಯದಂತೆ ದಿನಾಂಕ:09.02.2024 ರಂದು ಪ್ರಸ್ತಾವನೆಯನ್ನು ಕೇಂದ್ರ ಜಲ ಆಯೋಗಕ್ಕೆ ಹಿಂದಿರುಗಿಸಲಾಗಿರುತ್ತದೆ.<br>• ಯೋಜನೆಗೆ ಅವಶ್ಯವಿರುವ Environment Impact Assessment ಹಾಗೂ Environment Management Plan ವರದಿಗಳನ್ನು ತಯಾರಿಸಲು Terms of Reference (TOR) ಗಳಿಗೆ ಅನುಮೋದನೆ ಕೋರಿ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ (MoEF & CC) PARIVESH ಅಂತರ್ಜಾಲದಲ್ಲಿ ಸಲ್ಲಿಸಿದ್ದು, ಪ್ರಸ್ತುತ ದಿನಾಂಕ: 30.10.2024 ರಂದು "Upload DPR of Mekedatu project as finalised by MoJS and approved by CWMA" ಎಂದು ತಿಳಿಸಿ ಡೀಲಿಸ್ಟ್ ಮಾಡಲಾಗಿರುತ್ತದೆ.<br>• ಯೋಜನೆಯ ಮುಳುಗಡೆಗೊಳಪಡುವ ಪ್ರದೇಶವನ್ನು ಗುರುತಿಸಲು 770 Km FRL ಗಡಿರೇಖೆಯ ಗುರುತಿಸುವಿಕೆ ಹಾಗೂ ಮರಗಳ ಎಣಿಕೆ ಕಾರ್ಯ ಪೂರ್ಣಗೊಂಡಿರುತ್ತದೆ.<br>• ಸದರಿ ಯೋಜನೆಗೆ ಅವಶ್ಯವಿರುವ ಅರಣ್ಯ ಭೂಮಿಗೆ ಬದಲಾಗಿ 7404.64 ಹೆ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ compensatory afforestation land ಅನ್ನು ಮಂಡ್ಯ, ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಗುರುತಿಸಲಾಗಿದೆ. |

| ಕ್ರ. ಸಂ. | ವಿಷಯ | ಉತ್ತರಗಳು |
|---|---|---|
| | | • ಮೇಕೆದಾಟು ಯೋಜನೆಯ ಕಾಮಗಾರಿಗಳನ್ನು ಮತ್ತು ಭೂಸ್ವಾಧೀನ ಪ್ರಕ್ರಿಯೆಗಳನ್ನು ಚುರುಕುಗೊಳಿಸಲು ಸರ್ಕಾರದ ದಿನಾಂಕ:18.11.2023ರ ಆದೇಶದಲ್ಲಿ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯ ಒಂದು ವಿಭಾಗ ಕಛೇರಿ ಮತ್ತು ಒಂದು ಉಪವಿಭಾಗಕಛೇರಿಗಳನ್ನು ಸ್ಥಳಾಂತರಿಸಿ/ಮರುನಾಮಕೃಣ ಮಾಡಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಆರೋಬೆಲೆಯನ್ನು ಕೇಂದ್ರ ಸ್ಥಾನವನ್ನಾಗಿ ನಿಗದಿಪಡಿಸಲಾಗಿದ್ದು, ಪ್ರಸ್ತುತ ಈ ಕಛೇರಿಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. |
| ಆ | ಈ ಯೋಜನೆ ಜಾರಿಗೆ ಅಡ್ಡಿ ಇರುವ ಅಂಶಗಳೇನು; ಹಾಗೂ ಯೋಜನೆಯ ಕುರಿತು ತಮಿಳುನಾಡು ಸರ್ಕಾರ ಕೇಂದ್ರ ಮತ್ತು ರಾಜ್ಯದ ಜೊತೆ ನಡೆಸಿರುವ ಪತ್ರ ವ್ಯವಹಾರದ ಸಂಪೂರ್ಣ ಮಾಹಿತಿ ನೀಡುವುದು; | • ಈ ಯೋಜನೆಯ ವಿವರವಾದ ಯೋಜನಾ ವರದಿಯು ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಲ್ಲಿ ಪರಿಶೀಲನೆ ಹಂತದಲ್ಲಿರುತ್ತದೆ.<br>• ರಾಜ್ಯ ಸರ್ಕಾರದಿಂದ ದಿನಾಂಕ:30.04.2024 ಮತ್ತು ದಿನಾಂಕ:19.06.2024 ರಂದು ಸದರಿ ಯೋಜನೆಗೆ ಶೀಘ್ರವಾಗಿ ಸಂಬಂಧಪಟ್ಟ ತೀರುವಳಿ ನೀಡಬೇಕೆಂದು ಕೇಂದ್ರ ಜಲ ಆಯೋಗಕ್ಕೆ ಕೋರಲಾಗಿರುತ್ತದೆ.<br>• ಮುಂದುವರೆದು, ಕಳೆದ ಸಾಲಿನಲ್ಲಿ, ದಿನಾಂಕ:29.06.2024 ರಂದು ಮಾನ್ಯ ಮುಖ್ಯಮಂತ್ರಿಯವರು ಸನ್ಮಾನ್ಯ ಪ್ರಧಾನಮಂತ್ರಿಯವರಿಗೆ ಪತ್ರದ ಮೂಲಕ ಈ ಯೋಜನೆಯ DPR ಪ್ರಸ್ತಾವನೆಗೆ ಅನುಮೋದನೆಯನ್ನು ಹಾಗೂ ಪರಿಸರ ತೀರುವಳಿಯನ್ನು ನೀಡುವಂತೆ ಕೋರಿರುತ್ತಾರೆ.<br>• ಮಾನ್ಯ ಮುಖ್ಯಮಂತ್ರಿಯವರ ದಿನಾಂಕ: 29.06.2024 ರ ಪತ್ರಕ್ಕೆ ಉತ್ತರವಾಗಿ ಮಾನ್ಯ ಕೇಂದ್ರ ಮಂತ್ರಿಗಳು, ಕೇಂದ್ರ ಜಲಶಕ್ತಿ ಮಂತ್ರಾಲಯ, ಕೇಂದ್ರ ಸರ್ಕಾರ ರವರ ದಿನಾಂಕ: 20.01.2025 ರ ಪತ್ರದಲ್ಲಿ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ದಿನಾಂಕ: 09.02.2024 ರಂದು ಪ್ರಸ್ತಾವನೆಯನ್ನು ಕೇಂದ್ರ ಜಲ ಆಯೋಗಕ್ಕೆ ಹಿಂದಿರುಗಿಸಲಾಗಿ, CWC ನಲ್ಲಿ ಪರಿಶೀಲಿಸಲಾಗುತ್ತಿರುವುದಾಗಿ ತಿಳಿಸಿರುತ್ತಾರೆ.<br>• ದಿನಾಂಕ:20.06.2023, ದಿನಾಂಕ:24.02.2025 ಹಾಗೂ ದಿನಾಂಕ:07.07.2025ರಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಮಾನ್ಯ ಕೇಂದ್ರ ಮಂತ್ರಿಗಳು, ಕೇಂದ್ರ ಜಲಶಕ್ತಿ ಮಂತ್ರಾಲಯ, ಕೇಂದ್ರ ಸರ್ಕಾರ ರವರಿಗೆ ಪತ್ರದ ಮೂಲಕ ಹಾಗೂ ದಿನಾಂಕ:25.02.2025 ಹಾಗೂ 07.07.2025 ರಂದು ಕೇಂದ್ರ ಜಲಶಕ್ತಿ ಮಂತ್ರಾಲಯ, ಕೇಂದ್ರ ಸರ್ಕಾರ, ನವದೆಹಲಿಗೆ ಖುದ್ದು ಭೇಟಿ ನೀಡಿ ಮಾನ್ಯ ಕೇಂದ್ರ ಜಲಶಕ್ತಿ ಮಂತ್ರಿಯವರೊಂದಿಗೆ ಚರ್ಚೆಮಾಡಿ ಮೇಕೆದಾಟು ಯೋಜನೆಯನ್ನು ತ್ವರಿತವಾಗಿ ಕೈಗೊಳ್ಳಲು ಬೇಕಾಗಿರುವ ಅನುಮೋದನೆಗಳನ್ನು ನೀಡಬೇಕಾಗಿ ಕೋರಿರುತ್ತಾರೆ.<br>• ಮಾನ್ಯ ಉಪಮುಖ್ಯಮಂತ್ರಿಯವರ ದಿನಾಂಕ:24.02.2025 ರ ಪತ್ರಕ್ಕೆ ಉತ್ತರವಾಗಿ ಮಾನ್ಯ ಕೇಂದ್ರ ಮಂತ್ರಿಗಳು, ಕೇಂದ್ರ ಜಲಶಕ್ತಿ ಮಂತ್ರಾಲಯ, ಭಾರತದ ಸರ್ಕಾರ ರವರ ದಿನಾಂಕ: 11.06.2025 ರ ಪತ್ರದಲ್ಲಿ ಈ ಯೋಜನೆಯು ಪ್ರಸ್ತುತ CWCನಲ್ಲಿ ಪರಿಶೀಲನೆಯಲ್ಲಿದೆ ಎಂದು ತಿಳಿಸಿರುತ್ತಾರೆ.<br>• ಯೋಜನೆಯ ಅನುಮೋದನೆ ಕೋರಿ ನಿರಂತರ ಅನುಸರಣೆ ಮಾಡಲಾಗುತ್ತಿದೆ. |

| ಕ್ರ. ಸಂ. | ವಿಷಯ | ಉತ್ತರಗಳು |
|---|---|---|
| ಇ | ಈ ಯೋಜನೆಗೆ ಪರಿಸರ ಇಲಾಖೆಯಿಂದ ಮಂಜೂರಾತಿಗೆ ಇರುವ ಸಮಸ್ಯೆಗಳಾವುವು; ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | • ಸದರಿ ಯೋಜನೆಗೆ ಅವಶ್ಯವಿರುವ EIA (Environmental Impact Assessment) & EMP (Environmental Management Plan) ವರದಿಗಳನ್ನು ತಯಾರಿಸಲು Terms of References (ToR) ಅರ್ಜಿಯನ್ನು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯದ (MoEF& CC) ಅಂತರ್ಜಾಲದಲ್ಲಿ ದಿನಾಂಕ:20.06.2019 ರಂದು ಹಾಗೂ ಹೆಚ್ಚುವರಿ ಮಾಹಿತಿಗಳನ್ನು ದಿನಾಂಕ: 04.10.2019 ರಂದು MoEF ಅಂತರ್ಜಾಲದಲ್ಲಿ ಅಪ್ಲೋಡ್ ಮಾಡಲಾಗಿದೆ.<br>• MoEF ಮತ್ತು CC PARVESH ಅಂತರ್ಜಾಲದಲ್ಲಿ TOR ಗಾಗಿ ಸಲ್ಲಿಸಿದ್ದ ಅರ್ಜಿಯನ್ನು ದಿನಾಂಕ: 11.06.2022 ರಂದು ಡೀಲಿಸ್ಟ್ ಮಾಡಿದ್ದು, ಪುನಃ ದಿನಾಂಕ:01.06.2024 ರಂದು Terms of References (ToR) ಅನ್ನು PARIVESH-2 ಪೋರ್ಟಲ್‌ನಲ್ಲಿ ಮತ್ತೊಮ್ಮೆ ಅಪ್‌ಲೋಡ್ ಮಾಡಲಾಗಿದ್ದು, Member Secretary, MoEF & CC(EC) ರವರು ಕೋರಿದ್ದ ಹೆಚ್ಚುವರಿ ಮಾಹಿತಿಯನ್ನು (Essential Details Sought-EDS) ದಿನಾಂಕ:09.07.2024 ರಂದು ಅಪ್‌ಲೋಡ್ ಮಾಡಲಾಗಿರುತ್ತದೆ.<br>• ದಿನಾಂಕ:09.07.2024 ರಂದು Chief Engineer, Project proponent, MoEF&CC ರವರು "Upload DPR of Mekedatu project has finalised by MoJS and approved by CWMA" ಎಂದು ತಿಳಿಸಿರುತ್ತಾರೆ.<br>• ದಿನಾಂಕ:30.10.2024 ರಂದು ಪ್ರಸ್ತಾವನೆಯು PARIVESH-2 ಪೋರ್ಟಲ್‌ನಲ್ಲಿ ಡೀಲಿಸ್ಟ್ ಮಾಡಲಾಗಿರುತ್ತದೆ. |

ಸಂಖ್ಯೆ: ಜಸಂಇ 52 ಎನ್‌ಎಲ್‌ಎ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು